ನಾಗುತ್ತಾನೆ. ಅದಕ್ಕಿಂತಲೂ ಮೇಲಿನ ಯಾವ ಹುದ್ದೆಗೂ ಹೋಗುವುದಕ್ಕೆ ಅವನ ಜೀವಮಾನದಲ್ಲಿ ಅವಕಾಶವಿಲ್ಲ ಆ ಅವಕಾಶವನ್ನು ಕಲ್ಪಿಸಿಕೊಡಿ ಎಂದು ಅವರು ಕೇಳುತ್ತಿದ್ದಾರೆ. ಜನ ಜಾನುವಾರು ವೈದ್ಯರು ಹೇಗೆ ಕೆಲಸ ಮಾಡುತ್ತಾರೆ ಹಾಗೆಯೇ ನಾವೂ ಕೆಲಸ ಮಾಡುತ್ತೇವೆ, ಅವರಿಗೆ ಕೊಟ್ಟಿರುವ ಅವಕಾಶವನ್ನು ನಮಗೂ ಕೊಡಿ ಎಂದು ಅವರು ಕೇಳುತ್ತಿದ್ದಾರೆ ಇನ್ನೊಂದು ಬೇಡಿಕೆ ವಿಶೇಷ ವೇತನಕ್ಕೆ ಸಂಬಂಧಪಟ್ಟಿದ್ದು. ಸಂಪೂರ್ಣವಾಗಿ ತಮ್ಮ ಶರೀರವನ್ನು ಪ್ರಾಣಿಗಳ ಕಾಯಿಲೆಗಳನ್ನು ತಪಿಗಟ್ಟುವುದರಲ್ಲೇ ಕಳೆಯುವುದರಿಂದ, ಆ ಪ್ರಾಣಿಗಳಿಂದ ತಗಲುವ ಸಾಂಕ್ರಾಮಿಕ ರೋಗವನ್ನು ಮೂರ ಮಾಡಿಕೊಳ್ಳುವುದಕ್ಕೆ ವಿಶೇಷ ವೇತನವನ್ನು ಕೇಳುತ್ತಿದ್ದಾರೆ ಇದು ನ್ಯಾಯಬದ್ಧವಾದ ಬೇಡಿಕೆ. ಹಳ್ಳಿಗಳಲ್ಲಿ ಪಾಸ ಮಾಡುವ ಅಧಿಕಾರಿಗಳು ತಮ್ಮ ಕಾರ್ಯವನ್ನು ನಿರ್ವಹಿಸಲು ತೀರಳು ಮೈಲಿ ದೂರ ತಿರುಗಾಡಬೇಕಾಗುತ್ತದೆ, ಅದಕ್ಕಾಗಿ ಅವರು ರೂರಲ್ ಅಲೋಯನ್ಸ್ ಕೊಡಿ ಎಂದು ಕೇಳುತ್ತಿದ್ದಾರೆ ಈಗ ಅವರಿಗೆ ತಿಂಗಳಿಗೆ 30 ರೂಪಾಯಿ ಕೊಡಲಾಗುತ್ತಿದೆ ಅವರು ಹತ್ತಾರು ಹಳ್ಳಿಗಳಿಗೆ ಹೋಗಲು ಮೈಲಿಗಟ್ಟಲೆ ತಿರುಗಾಡಬೇಕಾಗುತ್ತದೆ. ಕನಿಷ್ಠ ದಿವನಕ್ಕೆ ಐದು ರೂಪಾಯಿಯಾದರೂ ಅವರಿಗೆ ಸಾಲುವುದಿಲ್ಲ. ಆದುದರಿಂದ, ಅವರು ಕೊನೆಯ ಪಕ್ಷ 140 ರೂಪಾಯಿಗಳನ್ನಾದರೂ ಟ್ರಾವೆಲಿಂಗ್ ಅಲೋಯನ್ಸ್ ಕೊಡಬೇಕೆಂದು ಕೇಳುತ್ತಿದ್ದಾರೆ. ಅವರ ಬೇಡಿಕೆಗಳು ಸಂಪೂರ್ಣ ಸಮರ್ಥನೀಯವಾದವು. ಆದುದರಿಂದ, ಮಾನ್ಯ ಸಚಿವರು ದಯವಾಡಿ ಅವರ ಬೇಡಿಕೆಗಳನ್ನು ಈಡೇರಿಸಿಕೊಡಬೇಕೆಂದು ಪ್ರಾರ್ಥನೆ.

ಶ್ರೀ ಬಿ. ಜಿ. ಬಣಕಾರ್.—ಕಾಂಪೌಂಡರ್‌ಗಳಿಗೆ ಮೊದಲು 100—ರೂಪಾಯಿ ಗ್ರೇಡ್ ಇತ್ತು, ಇದನ್ನು ಶ್ರೀ ನಾರಾಯಣ ಪೈ ವೇತನ ಆಯೋಗದವರು 300-700ಕ್ಕೆ ಏರಿಸಿದರು, ನಂತರ ಅಧಿಕೃತ ಸಮಿತಿಯವರು ಇದನ್ನು 340-880 ಹೆಚ್ಚು ಮಾಡಬೇಕೆಂದು ಸಿಫಾರಸು ಮಾಡಿದರು. ಆದೇ ಪ್ರಕಾರ ಲೈವ್ ಸ್ಟಾಕ್ ಇನ್‌ಸ್ಪೆಕ್ಟರು ಮೊದಲು 160-350 ಪಡೆಯುತ್ತಿದ್ದರು. ಇದನ್ನು ವೇತನ ಆಯೋಗದವರು 300-700ಕ್ಕೆ ಏರಿಸಿದರು. ನಂತರ ಅಧಿಕೃತ ಸಮಿತಿಯವರು ಇದನ್ನು 460-1000ಕ್ಕೆ ಏರಿಸಿದರು; ಮತ್ತು ಸೂಪರ್‌ವೈಸಿಂಗ್‌ಗಳಿದು ಮೊದಲು 2 00-450 ಗ್ರೇಡ್ ಇತ್ತು, ವೇತನ ಆಯೋಗದವರು ಅದನ್ನು 400-5 0ಕ್ಕೆ ಏರಿಸಿದರು-ಮತ್ತೆ ಅಧಿಕೃತ ಸಮಿತಿಯವರು ಅದನ್ನು 500 1120ಕ್ಕೆ ಏರಿಸಿದರು. ಲೈವ್ ಸ್ಟಾಕ್ ಇನ್‌ಸ್ಪೆಕ್ಟರ್ ಗ್ರೇಡ್ ಏನ್ನು ಈಗ ನೇಮಕ ಮಾಡುತ್ತಿಲ್ಲವಾದ್ದರಿಂದ, ಪ್ರಮೋಷನ್‌ಗೂ ಅವಕಾಶವಿದೆ. ಕೆಲವು ಸಲಹೆಗಳನ್ನು ಅಧಿಕೃತ ಸಮಿತಿಯವರು ಹೆರಿಶೀಲನೆ ಮಾಡುತ್ತಿದ್ದಾರೆ. ಇತರ ಬೇಡಿಕೆಗಳಲ್ಲೂ ನ್ಯಾಯವಾದವುಗಳಿದ್ದಾರೆ, ಅವುಗಳನ್ನು ಮಾಡಿಕೊಡೋಣ.

## Papers laid on the Table

SRI K. H. PATIL (Minister for Food and Forests) [On behalf of the Minister for Transport and Tourism, I beg to lay ]

Notification No, S O. 402 dated 28th January 1977.

Reciprocal agreement between the States of Madhya Pradesh and Karnataka.

under sub-section (3) of Section 3 A of the Karnataka Motor Vehicles Taxation Act 1957.

SRI M. Y. GHORPADE.—I lay.

Eighteenth Annual Report and Accounts of the Karnataka State Financial Corporation for the year 1976-77 and the Audit Report for the year ended 31st March 1976.

under section 33 (3) of the State Financial Corporation Act 1951.

MADAM SPEAKER.—All the Papers are laid on the Table.